**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕಡೂರು.

**ದಿನಾಂಕಃ 20 ನೇ ಜೂನ್ 2020**

**ಅಸಲು ದಾವಾ ಸಂಖ್ಯೆ 477/2018**

**ವಾದಿ/ಯರುಃ**

1) ಆಶಾ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ತೀರ್ಥೇಶ್, 46 ವರ್ಷ,
2) ಯಶೋದ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ಬಸವರಾಜು, 44 ವರ್ಷ,
3) ಮಧು ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ಪ್ರವೀಣ್ ಕುಮಾರ್, 40 ವರ್ಷ,
4) ರೇಣುಕ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ಕುಮಾರ, 38 ವರ್ಷ,

   1 ರಿಂದ 4 ನೇ ವಾದಿಯರು ವಾಸಃ 44/3, 1 ನೇ ಮುಖ್ಯ ರಸ್ತೆ, 4 ನೇ ತಿರುವು, ವಿದ್ಯಾನಿಕೇತನ ಶಾಲೆಯ ಹತ್ತಿರ, ವಿದ್ಯಾನಗರ, ಟಿ.ದಾಸರಹಳ್ಳಿ, ಬೆಂಗಳೂರು-560057.

5) ಹೇಮಾವತಿ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ಹನುಮಂತಪ್ಪ, 48 ವರ್ಷ,
6) ಸಾಕಮ್ಮ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ದೇವರಾಜು, 42 ವರ್ಷ,
7) ಕು.ಮಂಜುಳ ಬಿನ್ ಸಿ.ಬಿ.ಬೊಮ್ಮೇಗೌಡ, ಕೋಂ ಮಂಜಪ್ಪ, 36 ವರ್ಷ,

   5 ರಿಂದ 7 ನೇ ಪ್ರತಿವಾದಿಯರು ವ್ಯವಸಾಯಗಾರರು, ವಾಸಃ ಚಿಕ್ಕಂಗಳ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

   (ಪ್ರತಿನಿಧಿಸುವವರುಃ ಶ್ರೀ ಅಮೃತೇಶ್, ನ್ಯಾಯವಾದಿಗಳು)

**-ವಿರುದ್ಧ-**

**ಪ್ರತಿವಾದಿ/ಯರುಃ**

1) ಸಿ.ಬಿ.ಬೊಮ್ಮೇಗೌಡ ಬಿನ್ ಲೇಟ್ ಬಸಪ್ಪ, 72 ವರ್ಷ,

2) ಸಿ.ಬಿ.ಶಿವಕುಮಾರ್ ಬಿನ್ ಸಿ.ಬಿ.ಬೊಮ್ಮೇಗೌಡ, 30 ವರ್ಷ,

1, 2 ನೇ ಪ್ರತಿವಾದಿಯರು ವಾಸಃ ಚಿಕ್ಕಂಗಳ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

3) ಜಿ.ಟಿ.ಯಶೋದ ಕೋಂ ಲೇಟ್ ವೆಂಕಟರಾಮು, 84 ವರ್ಷ,

4) ಎಂ.ವಿ.ಜಯಚಂದ್ರ ಬಿನ್ ಲೇಟ್ ವೆಂಕಟರಾಮು, 44 ವರ್ಷ,

5) ಓಂಕಾರೇಶ್ವರ ಬಿನ್ ಲೇಟ್ ವೆಂಕಟರಾಮು, 30 ವರ್ಷ,

6) ಎ.ವಿ.ಕಾರ್ತಿಕ್ ಬಿನ್ ಲೇಟ್ ವೆಂಕಟರಾಮು, 28 ವರ್ಷ,

ಪ್ರತಿವಾದಿಯರು-3 ರಿಂದ 5 ರವರು ವಾಸಃ ಅನ್ನಪೂರ್ಣ ನಿಲಯ, ನಳಂದ ಪ್ರೌಢಶಾಲೆಯ ಹತ್ತಿರ, ಸಪ್ತಗಿರಿ ಬಡಾವಣೆ, ತುಮಕೂರು.

7) ಮರಿಯಮ್ಮ ಕೋಂ ಲೇಟ್ ಕೆ.ಎಸ್.ಸತ್ಯಮೂರ್ತಿ, 66 ವರ್ಷ, ನಿವೃತ್ತ ಶಿಕ್ಷಕಿ, ವಾಸಃ ಆದಿಶಕ್ತಿ ನಿಲಯ, ನಂ.145, ಹೌಸಿಂಗ್ ಬೋರ್ಡ್ ಕಾಲೋನಿ, ಲಕ್ಷ್ಮೀಪುರ, ಅರಸೀಕೆರೆ ಟೌನ್, ಹಾಸನ ಜಿಲ್ಲೆ.

(1 ಮತ್ತು 2 ನೇ ಪ್ರತಿವಾದಿಯರ ಪರ ಃ ಶ್ರೀ ಎಂ.ಮಂಜುನಾಥ, ನ್ಯಾಯವಾದಿಗಳು. 7 ನೇ ಪ್ರತಿವಾದಿ ಪರ ಃ ಶ್ರೀ ಕೆ.ಎ.ರವಿಶಂಕರ್, ನ್ಯಾಯವಾದಿಗಳು)

****

**ಮಧ್ಯಂತರ ಅರ್ಜಿ ಸಂಖ್ಯೆ -5 ರ ಕುರಿತಾಗಿ ಆದೇಶ**

ವಾದಿಯರು/ಅರ್ಜಿದಾರರು ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ -5 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20(ಎ) ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ ಅರ್ಜಿಗೆ ಪೂರಕವಾಗಿ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ಪ್ರತಿವಾದಿ-3 ರಿಂದ 6 ರವರಿಗೆ ಈ ದಾವೆಯ ಸಮನ್ಸ್ ನ್ನು ಬದಲಿ ಜಾರಿಯಾಗಿ ರಾಜ್ಯಮಟ್ಟದ ಕನ್ನಡ ದಿನಪತ್ರಿಕೆಯ ಪ್ರಕಟಣೆಯ ಮೂಲಕ ಜಾರಿಗೊಳಿಸಲು ಅನುಮತಿ ನೀಡಬೇಕೆಂದು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ.

**2. ವಾದಿಯರ ಪರ ವಕೀಲರು ಅರ್ಜಿಗೆ ಪೂರಕವಾಗಿ ಜ್ಞಾಪನಾ ಪತ್ರವನ್ನು ಸಲ್ಲಿಸಿದ್ದು, ಸದರಿ ಜ್ಞಾಪನ ಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆ :**

ವಾದಿಯರು ಈ ಪ್ರಕರಣವನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. 3 ರಿಂದ 6 ನೇ ಪ್ರತಿವಾದಿಯರು ನ್ಯಾಯಾಲಯದ ಸಮನ್ಸ್ ನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸುತ್ತಿಲ್ಲ. ಆದ್ದರಿಂದ 3 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಸಮನ್ಸ್ ನ್ನು ಜಾರಿಗೊಳಿಸುವುದು ತುಂಬಾ ಕಷ್ಟಸಾಧ್ಯವಾಗುತ್ತದೆ. ಹಾಗಾಗಿ ರಾಜ್ಯಮಟ್ಟದ ದಿನಪತ್ರಿಕೆ ಪ್ರಕಟಣೆಯ ಮೂಲಕ 3 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಸಮನ್ಸ್ ನ್ನು ಜಾರಿಗೊಳಿಸಲು ಈ ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ. ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಯರಿಗೆ ತುಂಬಲಾರದ ಹಾನಿಯುಂಟಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಈ ಕುರಿತಾಗಿ ಕಡತದಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿದಾಗ ಅರ್ಜಿದಾರರು/ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತಿನ ಕುರಿತಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕುರಿತು ದಾವೆಯನ್ನು ಸಲ್ಲಿಸಿದ್ದು, 1, 2 ಹಾಗೂ 7 ನೇ ಪ್ರತಿವಾದಿಯರು ಈ ದಾವೆಯಲ್ಲಿ ವಕೀಲರ ಮೂಲಕ ನ್ಯಾಯಾಲಯ ಮುಂದೆ ಹಾಜರಾಗಿರುತ್ತಾರೆ. ಆದರೆ 3 ರಿಂದ 6 ನೇ ಪ್ರತಿವಾದಿಯರಿಗೆ ಜಾರಿಗೊಳಿಸಿರುವ ನ್ಯಾಯಾಲಯದ ಸಮನ್ಸ್ ವಿಳಾಸವು ಅಸ್ಪಷ್ಟತೆಯಿಂದ ಕೂಡಿರುತ್ತದೆ ಎಂಬ ಹಿಂಬರಹದೊಂದಿಗೆ ಹಿಂತಿರುಗಿಸಿದ್ದು ಸಮನ್ಸ್ ಜಾರಿಯಾಗಿರುವುದಿಲ್ಲ. ಅಂತೆಯೇ 3 ರಿಂದ 6 ನೇ ಪ್ರತಿವಾದಿಯರಿಗೆ ನೋಂದಣಿ ಅಂಚೆಯ ಮೂಲಕ ದಾವಾ ಸಮನ್ಸ್ ನ್ನು ಜಾರಿಗೊಳಿಸಿದ್ದು ಅಂಚೆ ಇಲಾಖೆಯವರು ವಿಳಾಸ ಸಂಪೂರ್ಣವಾಗಿಲ್ಲ ಎಂಬ ಹಿಂಬರಹದೊಂದಿಗೆ ಹಿಂತಿರುಗಿಸಿರುತ್ತಾರೆ. ಆದ್ದರಿಂದ 3 ರಿಂದ 6 ನೇ ಪ್ರತಿವಾದಿಯರಿಗೆ ದಿನಪತ್ರಿಕೆಯ ಪ್ರಕಟಣೆಯ ಮೂಲಕ ನೋಟೀಸನ್ನು ಜಾರಿಗೊಳಿಸಲು ಅನುವು ಮಾಡಿಕೊಡುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅಗತ್ಯತೆ ಇರುತ್ತದೆ. ಹಾಗಾಗಿ ಅರ್ಜಿದಾರರು/ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ

ಸಂಖ್ಯೆ - 5 ನ್ನು ಪುರಸ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ ಃ

**ಆದೇಶ**

ಅರ್ಜಿದಾರರು/ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 5 ನ್ನು ಪುರಸ್ಕರಿಸಲಾಗಿದೆ. ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ. 3 ರಿಂದ 6 ನೇ ಪ್ರತಿವಾದಿಯರಿಗೆ ಸಮನ್ಸ್ ನ್ನು ಜಾರಿಗೊಳಿಸಲು ತುಮಕೂರು ಮತ್ತು ಚಿಕ್ಕಮಗಳೂರಿನಲ್ಲಿ ಪ್ರಕಟಣೆಗೊಳ್ಳುವ ರಾಜ್ಯಮಟ್ಟದ ದಿನಪತ್ರಿಕೆಯಲ್ಲಿ ಪ್ರಕಟಿಸಲು ವಾದಿಗೆ ಸೂಚಿಸಲಾಗಿದೆ .

ಪ್ರಕರಣವನ್ನು ದಿನಾಂಕ 22.06.2020 ಕ್ಕೆ ನೋಟೀಸಿನ ಕರಡು ಪ್ರತಿಯನ್ನು ಹಾಜರುಪಡಿಸಲು ನಿಗದಿಪಡಿಸಿ ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 20 ನೇ ಜೂನ್ 2020 ರಂದು ನಾನು ಉದ್ಘೋಷಿಸಿದ್ದೇನೆ.)

ಸಹಿ
(ರಘುರಾಮ ಎನ್.ಎಸ್.)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ, ಕಡೂರು.